**ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು ಪ್ರ.ದ.ನ್ಯಾ . ದಂ.ಯವರ ನ್ಯಾಯಾಲಯ, ಕುಂದಾಪುರ**

**ಸಿ.ಸಿ ನಂಬ್ರ: 16/2025**

ಸರ್ಕಾರದ ಪರ
ಕುಂದಾಪುರ ಠಾಣಾ ಪೊಲೀಸರು --- ಪಿರ್ಯಾದಿದಾರರು

-ಮತ್ತು-

ಮಹಮ್ಮದ್ ಹುಸ್ಸೈನ್ --- ಆರೋಪಿತರು

**ಃದೋಷಾರೋಪಣೆಃ**

**ಶ್ರೀಮತಿ ಶೃತಿ ಶ್ರೀ ಎಸ್. ಬಿ.ಎ., ಎಲ್‌ಎಲ್.ಬಿ., ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು ಪ್ರ.ದ.ನ್ಯಾ.ದಂ,. ಕುಂದಾಪುರ ಆದ ನಾನು ಆರೋಪಿತರಾದ ನಿಮಗೆ ಈ ಮೂಲಕ ಮಾಡುವ ದೋಷಾರೋಪಣೆ ಏನೆಂದರೆಃ**

ಮಹಮ್ಮದ್ ಹುಸ್ಸೈನ್, 22 ವರ್ಷ,
ತಂದೆಃ ಅಬ್ದುಲ್ ರಹೆಮಾನ್ ಸಾಹೇಬ್,
ವಾಸಃ ವಾರ್ಡ ನಂಬ್ರ 22 ಮಸೀದಿ
ಇಂಡ ನಗರ, ಕರ್ಟಗಿ, ಕೊಪ್ಪಳ. --- ಆರೋಪಿತರು

ಆಪಾದಿತರಾದ ನೀವು ಸಂಘರ್ಷಕ್ಕೊಳಿದ ಬಾಲಕ ಅಭಯ ಎಸ್ ಶಿರೋಳ ಎಂಬವನ ಜೊತೆ ಸೇರಿ ದಿ. 13.10.2024 ರಂದು ಸುಬ್ರಹ್ಮಣ್ಯ ಬಸ್ ನಿಲ್ದಾಣದ ಬಳಿ ಇರಿಸಿದ್ದ KA 35 EH 0738 ನೇ ಬಜಾಜ್ ಡಿಸ್ಕವರಿ ಮೋಟಾರು ಸೈಕಲನ್ನು 1 ನೇ ಆಪಾದಿತನು ಕಾನೂನು ಸಂಘರ್ಷಕ್ಕೊಳಿದ ಬಾಲಕನೊಂದಿಗೆ ಚಲಾಯಿಸಿಕೊಂಡು ಬಂದು ದಿ. 16.10.2024 ರಂದು ರಾತ್ರಿ 11.50 ಗಂಟೆಗೆ ಕುಂದಾಪುರ ತಾಲೂಕು, ಕೋಣಿ ಗ್ರಾಮದ ಕೋಣಿ ಎಂಬಲ್ಲಿರುವ ಕರ್ನಾಟಕ ಬ್ಯಾಂಕ್‌ನ ಬಾಗಿಲಿಗೆ ಹಾಗೂ ಎ.ಟಿ.ಎಂ. ಬಾಗಿಲಿಗೆ ಅಳವಡಿಸಿದ ಬೀಗಗಳನ್ನು ಕಬ್ಬಿಣದ ರಾಡ್ ಮತ್ತು ಸ್ಕ್ರೂ ಡ್ರೈವರ್‌ನಿಂದ ಮುರಿದು ಕಳವು ಮಾಡಲು ಪ್ರಯತ್ನಿಸಿದ್ದು , ಆ ಮೂಲಕ ಆರೋಪಿತರಾದ ನೀವು ಕಲಂ 303(4), ಕಲಂ 62 ರ ಬಿ ಎನ್ ಎಸ್ ಕೆಳಗೆ ಶಿಕ್ಷಾರ್ಹವಾದ ಅಪರಾಧವನ್ನು ಈ ನ್ಯಾಯಾಲಯದ ಸಂಜ್ಞೆಯೊಳಗೆ ಮಾಡಿರುವಿರಿ.

(ಸದರಿ ಆರೋಪಗಳ ಕುರಿತಂತೆ ನೀವು ಈ ನ್ಯಾಯಾಲಯದಿಂದ ವಿಚಾರಣೆಗೆ ಗುರಿಯಾಗಬೇಕೆಂದು ನಾನು ಈ ಮೂಲಕ ನಿರ್ದೇಶಿಸುತ್ತೇನೆ )

ದಿನಾಂಕಃ 30-01-2025

ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು
ಮತ್ತು ಪ್ರ.ದ.ನ್ಯಾ.ದಂ., ಕುಂದಾಪುರ.

ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು ಪ್ರ.ದ.ನ್ಯಾ.ದಂ. ನ್ಯಾಯಾಲಯ, ಕುಂದಾಪುರ

**ಸಿ.ಸಿ. ಸಂಖ್ಯೆ: 16/2025**

**ಫಿರ್ಯಾದುದಾರರುಃ** ಸರಕಾರದ ಪರವಾಗಿ ಕುಂದಾಪುರ ಠಾಣಾ ಪೋಲಿಸರು,

**- ವಿರುದ್ಧ -**

**ಆರೋಪಿ** ಃ ಮಹಮ್ಮದ್ ಹುಸೈನ್, ತಂದೆಃ ಅಬ್ದುಲ್ ರಹೆಮಾನ್ ಸಾಹೇಬ್.

1. **ನಿಮಗೆ ಓದಿ ಹೇಳಿದ ದೋಷಾರೋಪಣೆಯು ಅರ್ಥವಾಗಿದೆಯೇ ?**
   **ಉ.**
2. **ನೀವು ತಪ್ಪನ್ನು ಒಪ್ಪಿಕೊಳ್ಳುತ್ತೀರ ಅಥವಾ ವಿಚಾರಣೆ ಮಾಡ ಬಯಸುವಿರಾ ?**
   **ಉ.**

**ಮೇಲ್ಕಂಡ ದೋಷಾರೋಪಣೆಯನ್ನು ಆರೋಪಿಗೆ ತಿಳಿದ ಭಾಷೆಯಲ್ಲಿ ತೆರೆದ ನ್ಯಾಯಾಲಯದಲ್ಲಿ ಓದಿ ಹೇಳಿ ಆರೋಪಿ ಕೊಟ್ಟ ಉತ್ತರವನ್ನು ಬರೆದುಕೊಂಡಿದ್ದು ಅವು ಸರಿಯಾಗಿರುತ್ತವೆಂದು ಈ ಮೂಲಕ ದೃಢೀಕರಿಸುತ್ತೇನೆ.**

ಹೆಚ್ಚುವರಿ **ಸಿವಿಲ್ ನ್ಯಾಯಾಧೀಶರು ಮತ್ತು**
**ಪ್ರ.ದ.ನ್ಯಾ.ದಂ.,** ಕುಂದಾಪುರ.